# ಕುವೆಂಪು ವಿಶ್ವವಿದ್ಯಾನಿಲಯ

**ನಿರ್ದೇಶಕರ ಕಾರ್ಯಾಲಯ**

**ದೂರಶಿಕ್ಷಣ ನಿರ್ದೇಶನಾಲಯ**

ಜ್ಞಾನ ಸಹ್ಯಾದ್ರಿ, ಶಂಕರಘಟ್ಟ - 577 451, ಶಿವಮೊಗ್ಗ ಜಿಲ್ಲೆ, ಕರ್ನಾಟಕ.
ದೂರವಾಣಿ : 08282 - 256426, 256246

Fax: 08282-256370; website:www. kuvempuuniversitydde.org
E-mail: info@kuvempuuniversitydde.org; ssgc@ kuvempuuniversitydde.org


---

## ಆಂತರಿಕ ಮೌಲ್ಯ ಮಾಪನದ ಸಂಕ್ಷಿಪ್ತ ಸಾರಲೇಖಗಳಿಗೆ ವಿಷಯಗಳು (2010-11)

## ಸ್ನಾತಕ ಡಿಪ್ಲೋಮ - ಪಂಚಾಯಿತಿ ರಾಜ್

---

*ಸೂಚನೆಗಳು: (1) ಸಾರಲೇಖಗಳನ್ನು ಬರೆಯಲು ಪ್ರಾರಂಭಿಸುವ ಮೊದಲು ವಿದ್ಯಾರ್ಥಿಗಳು ಇದರೊಂದಿಗೆ ಲಗತ್ತಿಸಲಾಗಿರುವ ಸೂಚನೆಗಳ ಪಟ್ಟಿಯನ್ನು (Instructions List) ಓದಲು ಸೂಚಿಸಿದೆ. (2) ಪ್ರತಿ ಪತ್ರಿಕೆಗೆ ಒಟ್ಟು ಆಂತರಿಕ ಮೌಲ್ಯಮಾಪನ ಅಂಕಗಳು 20, ಆದರಲ್ಲಿ 15 ಅಂಕಗಳು ಸಾರಲೇಖಗಳಿಗೆ ಹಾಗೂ 05 ಅಂಕಗಳು ಸಂಪರ್ಕ ತರಗತಿಯ ಹಾಜರಿಗೆ. (3) ಪ್ರತಿ ಪತ್ರಿಕೆಯ ಪ್ರಶ್ನೆಸಂಖ್ಯೆ 1 ಪ್ರಬಂಧ ಮಾದರಿ ಪ್ರಶ್ನೆಯಾಗಿದ್ದು ಅದಕ್ಕೆ 10 ಅಂಕಗಳು, ಪ್ರಶ್ನೆಸಂಖ್ಯೆ 2 ಕಿರು ಟಿಪ್ಪಣಿ ಮಾದರಿಯ ಪ್ರಶ್ನೆಯಾಗಿದ್ದು, ಇದಕ್ಕೆ 5 ಅಂಕಗಳು. (4) ಎಲ್ಲಾ ಪತ್ರಿಕೆಗಳ ಪ್ರಶ್ನೆಗಳಿಗೆ ಉತ್ತರವಾಗಿ ನೀವು ಯಾವ ಗ್ರಾಮ ಪಂಚಾಯಿತಿಯನ್ನು ಕುರಿತು ಕ್ಷೇತ್ರಾಧ್ಯಯನ ಮಾಡುತ್ತಿದ್ದೀರಿ ಎಂಬುದರ ವಿವರಣೆಯನ್ನು ಬರೆಯಬೇಕು, ಅಂದರೆ ಗ್ರಾಮ ಪಂಚಾಯಿತಿ ಮತ್ತು ಅಧ್ಯಕ್ಷ/ಉಪಾಧ್ಯಕ್ಷರ ಹೆಸರು ಮತ್ತು ಅವರು ಸೇರಿರುವ ವರ್ಗಗಳ ವಿವರಗಳು.*

---

*ವಿ. ಸೂ.: ಪ್ರತೀ ಪತ್ರಿಕೆಯ ಆಂತರಿಕ ಮೌಲ್ಯಮಾಪನದ 05 ಅಂಕಗಳನ್ನು ಸಂಪರ್ಕ ತರಗತಿಯ ಹಾಜರಿಗೆ ಮೀಸಲಿರಿಸಲಾಗಿದೆ. ಎಲ್ಲಾ ವಿದ್ಯಾರ್ಥಿಗಳು ಇದನ್ನು ಗಮನಿಸಬೇಕು.*

### ಪತ್ರಿಕೆ-1: ವಿಕೇಂದ್ರಿಕರಣ: ಸಮಾಜೋ- ರಾಜಕೀಯ ಚೌಕಟ್ಟು

1. ಪಂಚಾಯಿತಿ ವ್ಯವಸ್ಥೆಯ ಜೊತೆಗೆ ನಿಮ್ಮ ಊರಿನ ಸ್ಥಳೀಯ ಸಂಘಟನೆಗಳು ಊರಿನ ಅಭಿವೃದ್ಧಿ ಕಾಮಗಾರಿಗಳಲ್ಲಿ ಯಾವ ರೀತಿಯಲ್ಲಿ ತೊಡಗಿಕೊಂಡಿವೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿ. ತೊಡಗಿಕೊಂಡಿಲ್ಲವೆಂದಾದಲ್ಲಿ ಇರುವ ತೊಡಕುಗಳನ್ನು ಚರ್ಚಿಸಿ.
2. ಹೊಸ ಗ್ರಾಮಪಂಚಾಯಿತಿ ಅಸ್ತಿತ್ವಕ್ಕೆ ಬಂದ ಮೇಲೆ ನಿಮ್ಮ ಊರಿನಲ್ಲಿ ಆದ ಸಾಮಾಜಿಕ ಬದಲಾವಣೆಗಳನ್ನು ಕುರಿತು ಟಿಪ್ಪಣಿ ಬರೆಯಿರಿ.

### ಪತ್ರಿಕೆ-2: ಕರ್ನಾಟಕದಲ್ಲಿ ಪಂಚಾಯಿತಿ ರಾಜ್ ವ್ಯವಸ್ಥೆ

1. ನಿಮ್ಮ ಊರಿನ ಗ್ರಾಮಪಂಚಾಯಿತಿಯು ನಿಮ್ಮ ಊರಿನಲ್ಲಿ ಕೈಗೊಂಡಿರುವ ಪ್ರಮುಖ ಅಭಿವೃದ್ಧಿ ಕೆಲಸಗಳು ಮತ್ತು ಅವುಗಳ ಗುಣಮಟ್ಟವನ್ನು ಚರ್ಚಿಸಿ.
2. ನಿಮ್ಮ ಊರಿನ ಗ್ರಾಮ ಪಂಚಾಯಿತಿಯ ಆಡಳಿತದಲ್ಲಿ ರಾಜಕೀಯ ಪಕ್ಷಗಳ ಹಸ್ತಕ್ಷೇಪದ ಸ್ವರೂಪವನ್ನು ಪಟ್ಟಿಮಾಡಿ.

### ಪತ್ರಿಕೆ - 3: ಹಣಕಾಸು- ಆಡಳಿತಾತ್ಮಕ ವಿಕೇಂದ್ರೀಕರಣ

1. ನಿಮ್ಮ ಗ್ರಾಮ ಪಂಚಾಯಿತಿಯಲ್ಲಿನ ಕಳೆದ ಐದು ವರ್ಷಗಳ ಹಣಕಾಸಿನ ಕ್ರೂಢೀಕರಣ ವಿನಿಯೋಗದ ಸ್ವರೂಪದ ಕುರಿತು ಒಂದು ಪ್ರಬಂದ ಬರೆಯಿರಿ.
2. ನಿಮ್ಮ ಗ್ರಾಮ ಪಂಚಾಯಿತಿಯ ಹಣಕಾಸಿನ ಪ್ರಮುಖ ಮೂಲಗಳ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ.

### ಪತ್ರಿಕೆ - 4: ಜನತೆಯ ಪಾಲ್ಗೊಳ್ಳುವಿಕೆ ಹಾಗೂ ವಿಕೇಂದ್ರೀಕೃತ ಯೋಜನೆ

1. ನಿಮ್ಮ ಊರಿನಲ್ಲಿ ನಡೆಯುವ ಗ್ರಾಮಸಭೆಯಲ್ಲಿ ಚರ್ಚಿತವಾದ ವಿಷಯಗಳ ಸ್ವರೂಪ ಮತ್ತು ಪ್ರಮುಖ ನಿರ್ಣಯಗಳ ಕುರಿತು ಒಂದು ಪ್ರಬಂದ ಬರೆಯಿರಿ.
2. ನಿಮ್ಮ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮ ಯೋಜನೆ ರೂಪಿಸುವ ಪ್ರಕ್ರಿಯೆಯ ಕುರಿತು ಒಂದು ಟಿಪ್ಪಣಿ ಬರೆಯಿರಿ.

*****